ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಆಗಸ್ಟ್ ೨೩, ೨೦೧೨ (ಭಾದ್ರಪದ ೧, ಶಕ ವರ್ಷ ೧೯೩೪)	ಸಂಚಿಕೆ ೩೪

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಗಳು, ಕರ್ನಾಟಕ ಉಚ್ಛ ನ್ಯಾಯಾಲಯದ ಅಧಿಸೂಚನೆಗಳು

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 39 ಎಟಿಎಸ್ 2012, ಬೆಂಗಳೂರು, ದಿನಾಂಕ 26.06.2012

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 39 ಎಟಿಎಸ್ 2012 ದಿನಾಂಕ: 25–06–2012ರ ಕ್ರಮ ಸಂಖ್ಯೆ: 1ರ ಕಲಂ 2ರಲ್ಲಿ "ಬಿ. ಅಂಬಾಲಯ್ಯ" ಎಂದು ನಮೂದಿಸಿರುವುದನ್ನು "ಬಿ. ಅಹೋಬಲಯ್ಯ" ಎಂದು ಸರಿಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ. ರಾಮಲಿಂಗಯ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1040

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 117 ಎಲ್ಎಜಿ 2012, ಬೆಂಗಳೂರು, ದಿನಾಂಕ: 11–07–2012.

ಶ್ರೀ ಕೆ.ವಿ. ವೆಂಕಟೇಶ ಗೌಡ, ಅಪರ ಸರ್ಕಾರಿ ವಕೀಲರು, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 31-07–2012 ರಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯ ಅಪರ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಪಿ. ನಾಗರಾಜ,

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1),

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 1047

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 182 ಎಲ್‌ಎಜಿ 2010, ಬೆಂಗಳೂರು, ದಿನಾಂಕ: 11–07–2012.

ಶ್ರೀ ಎಸ್.ಕೆ. ಬಸವರಾಜು, ಅಪರ ಸರ್ಕಾರಿ ವಕೀಲರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, ಇವರ ಸೇವಾವಧಿಯು ಮುಕ್ತಾಯವಾಗಿರುವುದರಿಂದ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 26(2) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಶ್ರೀ ಬಿ. ರವೀಂದ್ರ ಬಿನ್ ಲೇ. ಬಿಳಿಗಿರಯ್ಯ, ಇವರನ್ನು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಪಿ. ನಾಗರಾಜ,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 1048

LAW, JUSTICE AND HUMAN RIGHTS SECRETARIAT

NOTIFICATION

No. LAW 175 LAC 2012, Bangalore, Dated 08-08-2012

The resignation tendered by Sri Santhkumar V. Mahale, Associate Advocate, Supreme Court of India, New Delhi, has been accepted with effect from 22-02-2012.

By Order and in the name of Governor of Karnataka
M.P. NAGARAJA,
Under Secretary to Government (Admn-1),
Law, Justice and Human Rights Department.

P.R. 1049

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 134 ಶಿಸನೇ 2010, ಬೆಂಗಳೂರು, ದಿನಾಂಕ: 10–08–2012

ಶ್ರೀ ಎಸ್.ವಿ. ರಾಮಚಂದ್ರ, ಅಧ್ಯಕ್ಷರು, ಮೆ॥ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಬೆಂಗಳೂರು ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ನಾಗರಾಜಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ–2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ. (ರಾಜ್ಯ ಶಿಷ್ಟಾಚಾರ)

ಪಿ.ಆರ್. 1050

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 82 ಶಿಸನೇ 2012, ಬೆಂಗಳೂರು, ದಿನಾಂಕ: 04–08–2012.

ಶ್ರೀ ಮಲ್ಲಿಕಾರ್ಜುನ ವಿ. ಸಾವಕಾರ, ಅಧ್ಯಕ್ಷರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗೋಕುಲ ರಸ್ತೆ, ಹುಬ್ಬಳ್ಳಿ ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಸಂಪುಟ ದರ್ಜೆಯ ಸಚಿವರ ಸ್ಥಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ನಾಗರಾಜಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ–2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ. (ರಾಜ್ಯ ಶಿಷ್ಟಾಚಾರ)

ಪಿ.ಆರ್. 1051

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 110 ಕೈಸೇವಿ 2012, ಬೆಂಗಳೂರು, ದಿನಾಂಕ: 10–08–2012.

ಶ್ರೀ ಬಿ. ರಮೇಶ್, ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಿಯೋಜನೆ ಮೇರೆಗೆ ಜಂಟಿ ನಿರ್ದೇಶಕರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಬೆಂಗಳೂರು, ಇಲ್ಲಿನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಅಧಿಕ ಪ್ರಭಾರದಲ್ಲಿರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ರಾಣುಕಾರಾಧ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು).

ಪಿ.ಆರ್. 1052

HIGH COURT OF KARNATAKA, BANGALORE

NOTIFICATION

No. HCE 772/ 2012, Bangalore, Dated 07th August 2012

Sri Abid Hussain, Deputy Registrar of this office is permitted to retire from service on the afternoon of 31-08-2012 on attaining the age of superannuation and he will be relieved of his duties in this office on the afternoon of 31-08-2012.

By Order of Hon'ble the Chief Justice,

P. KRISHNA BHAT,

Registrar General.

P.R. 1053

HIGH COURT OF KARNATAKA, BANGALORE

NOTIFICATION

No. RSB/81(1)/2012, Bangalore, Dated 08th August 2012

In pursuance of the High Court Notification No. GOB (I) 175/2006 dated 25-05-2012 the cases S.C. Nos. 141/2011, 113/2011, 112/2011 and 121/2011 pending on the file of Fast Track Court, chitradurga are hereby transferred to the file of the Prl. District and Sessions Judge, Bangalore Rural District, Bangalore for trial and disposal in accordance with Law.

By Order of the High Court,

P. KRISHNA BHAT,

Registrar General.

P.R. 1054

HIGH COURT OF KARNATAKA, BANGALORE

NOTIFICATION

No. HCE 81(3)/ 2012, Bangalore, Dated 08th August 2012

In pursuance of the High Court Notification No. GOB (I) 175/2006 dated 25-05-2012 the cases S.C. Nos. 347/2011 and 326/2011 pending on the file of Fast Track Court-IV, Bangalore and C.No. 40/2010 pending on the file of District and Sessions Court, Bangalore are hereby transferred to the file of the Prl. District and Sessions Judge, Bangalore Rural District, Bangalore for trial and disposal in accordance with Law.

By Order of the High Court,

P. KRISHNA BHAT,

Registrar General.

P.R. 1055

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 26 ಭೂದಾಸೇ(1) 2012, ಬೆಂಗಳೂರು, ದಿನಾಂಕ: 07–08–2012.

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎಸ್. ರಾಜಾನಾಯ್ಕ್, ಭೂದಾಖಲೆಗಳ ಉಪ ನಿರ್ದೇಶಕರು (ಹಾಲಿ ಸ್ಥಳ ನಿರೀಕ್ಷಣೆಯಲ್ಲಿರುವ) ಇವರನ್ನು ಸಾರ್ವಜನಿಕ ಹಾಗೂ ಆಡಳಿತದ ಹಿತದೃಷ್ಟಿಯಿಂದ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಯುಪಿಓಆರ್ ಯೋಜನೆ, ಕಂದಾಯ ಇಲಾಖೆ, ಬೆಂಗಳೂರು ಇಲ್ಲಿ ಖಾಲಿ ಇರುವ ಭೂದಾಖಲೆಗಳ ಉಪ ನಿರ್ದೇಶಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಶಂಭುಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಮಾಪನ).

ಪಿ.ಆರ್. 1056

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 63 ಎಟಿಎಸ್ 2012, ಬೆಂಗಳೂರು, ದಿನಾಂಕ: 09–08–2012.

ಶ್ರೀ ಕೆ. ಮಥಾಯಿ, ತಹಶೀಲ್ದಾರ್, ಹಾಸನ ತಾಲ್ಲೂಕು ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1057

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 438 ಎಎಸ್‌ಡಿ 2011, ಬೆಂಗಳೂರು, ದಿನಾಂಕ: 30–06–2012.

ಕಂದಾಯ ಇಲಾಖೆಯ ತಹಶೀಲ್ದಾರ್ ಗ್ರೇಡ್–1 ವೃಂದದ ಶ್ರೀ ಎಂ.ಎಸ್. ಸುರೇಶ್, ಗೇಲ್ (ಇಂಡಿಯಾ) ಲಿಮಿಟೆಡ್, ಬೆಂಗಳೂರು ಇವರನ್ನು ಸರ್ಕಾರದ ಸೇರ್ಪಡೆ ಅಧಿಸೂಚನೆ ಸಂಖ್ಯೆ ಆರ್‌ಡಿ 438 ಎಎಸ್‌ಡಿ 2011 ದಿನಾಂಕ 28–1–2012 ರನ್ವಯ ಸದರಿಯವರು ವಯೋನಿವೃತ್ತಿ ಹೊಂದಿದ ಕಾರಣ ಸರ್ಕಾರದ ಸೇವೆಯಿಂದ ದಿನಾಂಕ 30–6–2012 ರ ಅಪರಾಹ್ನದಂದು ಸೇವೆಯಿಂದ ಬಿಡುಗಡೆ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1059

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಒಇ 342 ಪಿಪಿಸಿ 2012, ಬೆಂಗಳೂರು, ದಿನಾಂಕ : 11–7–2012

ದಂಡ ಪ್ರಕ್ರಿಯಾ ಸಂಹಿತೆ (1978ರ ತಿದ್ದುಪಡೆ ಅಧಿನಿಯಮ) ಮೂಲಕ ತಿದ್ದುಪಡೆಯಾದಂತೆ ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ ಸಂಖ್ಯೆ 2) ಕಲಂ : 24ರ ಉಪಕಲಂ (8) ಮತ್ತು ಕರ್ನಾಟಕ ಕಾನೂನು ಅಧಿಕಾರಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 1977ರ ನಿಯಮ 30 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ತಿಪಟೂರಿನ ತ್ವರಿತ ವಿಲೇವಾರಿ ನ್ಯಾಯಾಲಯದ ಎಸ್.ಸಿ.ನಂ. 53/2011 ರ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಶ್ರೀ ಎಸ್.ಟಿ. ಕುಲಕರ್ಣಿ, ನಿವೃತ್ತ ಸರ್ಕಾರಿ

ಅಭಿಯೋಜಕರು ಹಾಗೂ ವಕೀಲರು, 6ನೇ ಕ್ರಾಸ್, ವಿದ್ಯಾನಗರ, ತುಮಕೂರು ಇವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ವಿಶೇಷ ಸರ್ಕಾರಿ ಅಭಿಯೋಜಕರ ಸಂಭಾವನೆ/ವೆಚ್ಚವನ್ನು ಅರ್ಜಿದಾರರಾದ ಶ್ರೀ ನಾಗೇಂದ್ರ ಬಿನ್ ಲೇಟ್ ಲಕ್ಷ್ಮಿನಾರಾಯಣ ಶೆಟ್ಟಿ, ಸಾರ್ಥವಳ್ಳಿ, ತಿಪಟೂರು ಅಂಚೆ, ತುಮಕೂರು ಜಿಲ್ಲೆ ಇವರೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ).

ಪಿ.ಆರ್. 1046

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕಂಇ 68 ಮುನೋಮು 2012, ಬೆಂಗಳೂರು, ದಿನಾಂಕ : 8–8–2012

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ನಿರ್ವಹಣೆಯನ್ನು ಸರ್ಕಾರದ ಆದೇಶ ಸಂಖ್ಯೆ : ಸಇ 98 ಸಸಂನೋ 2011, ದಿನಾಂಕ : 5–7–2012 ರಲ್ಲಿ ಸಹಕಾರ ಇಲಾಖೆಯು ಕಂದಾಯ ಇಲಾಖೆಗೆ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 2(ಇ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಕಾಯ್ದೆಯ ನೋಂದಣಿ ಕಾರ್ಯಗಳನ್ನು ನಿರ್ವಹಿಸಲು ಈ ಕೆಳಗಿನ ಕೋಷ್ಟಕದ ಕಲಂ (2) ರಲ್ಲಿರುವ ಅಧಿಕಾರಗಳನ್ನು ಕಾಲಂ (3) ರಲ್ಲಿ ತೋರಿಸಿರುವ ಕ್ಷೇತ್ರಗಳಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಕ್ರ. ಸಂಖ್ಯೆ	ಅಧಿಕಾರಿಗಳು	ಕ್ಷೇತ್ರ
1	2	3
1.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಶಿವಾಜಿನಗರ, ಬೆಂಗಳೂರು	ಬೆಂಗಳೂರು ಜಿಲ್ಲೆಯ ಶಿವಾಜಿನಗರ, ಕೆ.ಆರ್.ಪುರಂ, ಬಾಣಸವಾಡಿ, ಮಹಾದೇವಪುರ, ಬಿದರಹಳ್ಳಿ ಮತ್ತು ವರ್ತೂರು ಉಪ ನೋಂದಣಿ ಕಛೇರಿಗಳ ವ್ಯಾಪ್ತಿ
2.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ರಾಜಾಜಿನಗರ, ಬೆಂಗಳೂರು	ಬೆಂಗಳೂರು ಜಿಲ್ಲೆಯ ರಾಜಾಜಿನಗರ, ಶ್ರೀರಾಂಪುರ, ಪೀಣ್ಯ, ಲಗ್ಗೆರೆ, ನಾಗರಬಾವಿ, ಮಾದನಾಯಕನಹಳ್ಳೀ, ದಾಸನಪುರ ಉಪ ನೋಂದಣಿ ಕಛೇರಿಗಳ ವ್ಯಾಪ್ತಿ
3.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಗಾಂಧಿನಗರ, ಬೆಂಗಳೂರು	ಬೆಂಗಳೂರು ಜಿಲ್ಲೆಯ ಗಾಂಧಿನಗರ, ಹೆಬ್ಬಾಳ, ಕಾಚರಕನಹಳ್ಳಿ, ಯಲಹಂಕ, ಬ್ಯಾಟರಾಯನಪುರ, ಜಾಲ, ಹೆಸರುಘಟ್ಟ ಮತ್ತು ಅಧಿಕ ಜಿಲ್ಲಾ ನೋಂದಣಾಧಿಕಾರಿಗಳು, ಬಿಡಿಎ ಸಂಕೀರ್ಣದ ಉಪ ನೋಂದಣಿ ಕಛೇರಿಗಳ ವ್ಯಾಪ್ತಿ
4.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಜಯನಗರ, ಬೆಂಗಳೂರು	ಬೆಂಗಳೂರು ಜಿಲ್ಲೆಯ ಕೆಂಗೇರಿ, ರಾಜರಾಜೇಶ್ವರಿನಗರ, ಜೆ.ಪಿ.ನಗರ, ತಾವರೆಕೆರೆ, ಬೊಮ್ಮನಹಳ್ಳಿ, ಬೇಗೂರು ಉಪ ನೋಂದಣಿ ಕಛೇರಿಗಳ ವ್ಯಾಪ್ತಿ
5.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬಸವನಗುಡಿ, ಬೆಂಗಳೂರು	ಬೆಂಗಳೂರು ಜಿಲ್ಲೆಯ ಬಸವನಗುಡಿ, ಬನಶಂಕರಿ, ಆನೇಕಲ್ ಕಸಬಾ, ಜಿಗಣಿ, ಅತ್ತಿಬೆಲೆ, ಸರ್ಜಾಪುರ ಉಪ ನೋಂದಣಿ ಕಛೇರಿಗಳ ವ್ಯಾಪ್ತಿ
6.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಬೆಂಗಳೂರು ಗ್ರಾಮಾಂತರ ಜಿಲ್ಲೆ
7.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬಾಗಲಕೋಟೆ	ಬಾಗಲಕೋಟೆ ಜಿಲ್ಲೆ
8.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೆಳಗಾಂ	ಬೆಳಗಾಂ ಜಿಲ್ಲೆ

ಕ್ರ. ಸಂಖ್ಯೆ	ಅಧಿಕಾರಿಗಳು	ಕ್ಷೇತ್ರ
1	2	3
9.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬಳ್ಳಾರಿ	ಬಳ್ಳಾರಿ ಜಿಲ್ಲೆ
10.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬೀದರ್	ಬೀದರ್ ಜಿಲ್ಲೆ
11.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಬಿಜಾಪುರ	ಬಿಜಾಪುರ ಜಿಲ್ಲೆ
12.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಚಾಮರಾಜನಗರ	ಚಾಮರಾಜನಗರ ಜಿಲ್ಲೆ
13.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಚಿಕ್ಕಮಗಳೂರು	ಚಿಕ್ಕಮಗಳೂರು ಜಿಲ್ಲೆ
14.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ ಜಿಲ್ಲೆ
15.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಚಿತ್ರದುರ್ಗ	ಚಿತ್ರದುರ್ಗ ಜಿಲ್ಲೆ
16.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಮಂಗಳೂರು	ದಕ್ಷಿಣ ಕನ್ನಡ ಜಿಲ್ಲೆ
17.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ದಾವಣಗೆರೆ	ದಾವಣಗೆರೆ ಜಿಲ್ಲೆ
18.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಧಾರವಾಡ	ಧಾರವಾಡ ಜಿಲ್ಲೆ
19.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಗದಗ್	ಗದಗ್ ಜಿಲ್ಲೆ
20.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಗುಲ್ಬರ್ಗಾ	ಗುಲ್ಬರ್ಗಾ ಜಿಲ್ಲೆ
21.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಹಾಸನ	ಹಾಸನ ಜಿಲ್ಲೆ
22.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಹಾವೇರಿ	ಹಾವೇರಿ ಜಿಲ್ಲೆ
23.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕೊಡಗು	ಕೊಡಗು ಜಿಲ್ಲೆ
24.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕೋಲಾರ	ಕೋಲಾರ ಜಿಲ್ಲೆ
25.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕೊಪ್ಪಳ	ಕೊಪ್ಪಳ ಜಿಲ್ಲೆ
26.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಮಂಡ್ಯ	ಮಂಡ್ಯ ಜಿಲ್ಲೆ
27.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಮೈಸೂರು	ಮೈಸೂರು ಜಿಲ್ಲೆ

ಕ್ರ. ಸಂಖ್ಯೆ	ಅಧಿಕಾರಿಗಳು	ಕ್ಷೇತ್ರ
1	2	3
28.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ರಾಯಚೂರು	ರಾಯಚೂರು ಜಿಲ್ಲೆ
29.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ರಾಮನಗರ	ರಾಮನಗರ ಜಿಲ್ಲೆ
30.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಶಿವಮೊಗ್ಗ	ಶಿವಮೊಗ್ಗ ಜಿಲ್ಲೆ
31.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ತುಮಕೂರು	ತುಮಕೂರು ಜಿಲ್ಲೆ
32.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಉಡುಪಿ	ಉಡುಪಿ ಜಿಲ್ಲೆ
33.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಾರವಾರ	ಉತ್ತರ ಕನ್ನಡ ಜಿಲ್ಲೆ
34.	ಜಿಲ್ಲಾ ನೋಂದಣಾಧಿಕಾರಿಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಯಾದಗಿರಿ	ಯಾದಗಿರಿ ಜಿಲ್ಲೆ

ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ : ಸಇ 98 ಸಸಂನೋ 2011, ದಿನಾಂಕ : 5–7–2012ರ ಪುಟ–4 ರ ಕಂಡಿಕೆ 3 ರಲ್ಲಿ ಸಹಕಾರ ಇಲಾಖೆಯು ನಮೂದಿಸಿರುವಂತೆ ಸಂಬಂಧಪಟ್ಟ ಕಡತ ಹಾಗೂ ಸ್ವೀಕೃತಿಗಳನ್ನು ಕಂದಾಯ ಇಲಾಖೆಗೆ ಪಟ್ಟಿ ಮಾಡಿ ಕಳುಹಿಸುರವವರೆಗೆ ಸದರಿ ಕಡತಗಳ ಕುರಿತು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯಡಿ 1960ರ ಕಲಂ 25 ಹಾಗೂ 27 ಎ ರನ್ವಯ ಕಂದಾಯ ಇಲಾಖೆಯ ಕಾರ್ಯನಿರ್ವಹಿಸುವಲ್ಲಿ ಸಹಕಾರ ಇಲಾಖೆಯವರು ಮಾಹಿತಿ ಹಕ್ಕು ನಿಯಮದಡಿ ಬರುವ ಪ್ರಕರಣಗಳು ಮತ್ತು ನ್ಯಾಯಾಲಯ ಪ್ರಕರಣಗಳಲ್ಲಿ ಎಲ್ಲಾ ರೀತಿಯ ಸಹಕಾರ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಕೆ. ರಾಮಚಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ).

ಪಿ.ಆರ್. 1058

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಒಇ 371 ಪಿಪಿಸಿ 2012, ಬೆಂಗಳೂರು, ದಿನಾಂಕ : 31–7–2012

ದಂಡ ಪ್ರಕ್ರಿಯಾ ಸಂಹಿತೆ (1978ರ ತಿದ್ದುಪಡೆ ಅಧಿನಿಯಮ) ಮೂಲಕ ತಿದ್ದುಪಡಿಯಾದಂತೆ ದಂಡ ಪ್ರಕ್ರಿಯಾ ಸಂಹಿತೆ 1973ರ (1974ರ ಕೇಂದ್ರ ಅಧಿನಿಯಮ ಸಂಖ್ಯೆ 2) ಕಲಂ : 24ರ ಉಪಕಲಂ (8) ಮತ್ತು ಕರ್ನಾಟಕ ಕಾನೂನು ಅಧಿಕಾರಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 1977ರ ನಿಯಮ 30 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಬೆಂಗಳೂರು ನಗರದ 15ನೇ ತ್ವರಿತ ವಿಲೇವಾರಿ ನ್ಯಾಯಾಲಯದ ಎಸ್.ಸಿ. ಸಂಖ್ಯೆ 927/2011 ರ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಶ್ರೀಮತಿ ಆರ್.ಎಸ್. ಜಯಶ್ರೀ, ವಕೀಲರು, ನಂ. 42/3–1, 1ನೇ ಮುಖ್ಯ ರಸ್ತೆ, ಪ್ರಾಪ್ತಿ, ಅತ್ತಿಗುಪ್ಪೆ, ವಿಜಯನಗರ 2ನೇ ಹಂತ, ಬೆಂಗಳೂರು–560040 ಇವರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ವಿಶೇಷ ಸರ್ಕಾರಿ ಅಭಿಯೋಜಕರ ಸಂಭಾವನೆ/ವೆಚ್ಚವನ್ನು ಅರ್ಜಿದಾರರಾದ ಶ್ರೀ ಮುನಿರಾಜು ಬಿನ್ ನಾರಾಯಣ್, ಪಾಪರ್ ಪಟ್ಟಿ, ಪೆನ್ನಾಗರಂ ತಾಲ್ಲೂಕು, ಧರ್ಮಪುರಿ ಜಿಲ್ಲೆ, ತಮಿಳುನಾಡು ಇವರೇ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ).

ಪಿ.ಆರ್. 1060

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಒಇ 102 ಪೊಪೆಸೆ 2012, ಬೆಂಗಳೂರು, ದಿನಾಂಕ : 9–8–2012

ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ) ಇವರ ಜ್ಞಾಪನಾ ಪತ್ರ ಸಂಖ್ಯೆ : ಸಿಬಿಎಸ್ : 94 : ಕಿ :ಇಂ : ವರ್ಗ : ಇಎಸ್ಇ: 2012–13, ದಿನಾಂಕ : 26–7–2012 ರಲ್ಲಿ ಶ್ರೀ ಎಂ.ಜಿ. ಶಿವಕುಮಾರ್, ಕಿರಿಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ) ಬೆಂಗಳೂರು, ಇವರ ಸೇವೆಯನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತಕ್ಕೆ ಮರು ಸ್ಥಳನಿಯುಕ್ತಿಗೊಳಿಸಲು ಒಳಾಡಳಿತ ಇಲಾಖೆಯ ವಶಕ್ಕೆ ನೀಡಲಾಗಿದೆ. ಶ್ರೀ ಎಂ.ಜಿ. ಶಿವಕುಮಾರ್, ಕಿರಿಯ ಇಂಜಿನಿಯರ್, ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದಲ್ಲಿ ಕಿರಿಯ ಇಂಜಿನಿಯರ್, ಹುದ್ದೆಗೆ ನಿಯೋಜನೆ ಮೇಲೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಹೆಚ್.ಕೆ. ನಿಂಗಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ).

ಪಿ.ಆರ್. 1061

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 39 ಎಟಿಎಸ್ 2012, ಬೆಂಗಳೂರು, ದಿನಾಂಕ: 25.06.2012.

ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರ್ ವೃಂದದ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ/ಆಡಳಿತ ಹಿತದೃಷ್ಠಿಯಿಂದ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

ಕ್ರ. ಸಂ.	ತಹಶೀಲ್ದಾರರ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ವರ್ಗಾಯಿಸಿ ನೇಮಿಸಿದ ಸ್ಥಳ
1	**ಬಿ. ಅಂಬಾಲಯ್ಯ,** ತಹಶೀಲ್ದಾರ್, ತುಮಕೂರು ತಾಲ್ಲೂಕು, (ವರ್ಗಾವಣೆ ಆದೇಶದಲ್ಲಿರುವವರು)	ಇವರನ್ನು ತಹಶೀಲ್ದಾರ್ ಆಗಿ ತುಮಕೂರು ತಾಲ್ಲೂಕಿನಲ್ಲಿಯೇ ಮುಂದುವರಿಸಿದೆ.
2	**ಶಿವಸ್ವಾಮಿ** ತಹಶೀಲ್ದಾರ್ (ಸ್ಥಳ ನಿರೀಕ್ಷಣೆಯಲ್ಲಿರುವವರು)	ತಹಶೀಲ್ದಾರ್, ಟಿ. ನರಸೀಪುರ ತಾಲ್ಲೂಕು – ಶ್ರೀ ಗೀತಾಕೃಷ್ಣರವರ ಜಾಗಕ್ಕೆ.
3	**ಮಹೇಶ್ ಬಾಬು,** ತಹಶೀಲ್ದಾರ್ (ತುಮಕೂರು ತಾಲ್ಲೂಕಿಗೆ ವರ್ಗಾವಣೆ ಆದೇಶದಲ್ಲಿರುವವರು)	ತಹಶೀಲ್ದಾರ್, ಹಳಿಯಾಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – ಖಾಲಿ ಹುದ್ದೆಗೆ.
4	**ದುಂಡಪ್ಪ ಈರಪ್ಪ ಹೆಗ್ಗೊಂಡ** ತಹಶೀಲ್ದಾರ್, ಉಪವಿಭಾಗಾಧಿಕಾರಿಯವರ ಕಛೇರಿ ಜಮಖಂಡಿ, ಬಾಗಲಕೋಟೆ ಜಿಲ್ಲೆ.	ತಹಶೀಲ್ದಾರ್, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ – ಶ್ರೀಮತಿ ಗೀತಾ ಕವಲಗಿ ಇವರ ಜಾಗಕ್ಕೆ.
5	**ಗೀತಾ ಕವಲಗಿ** ತಹಶೀಲ್ದಾರ್, ರಾಮದುರ್ಗಾ ತಾಲ್ಲೂಕು. ಬೆಳಗಾವಿ ಜಿಲ್ಲೆ.	ತಹಶೀಲ್ದಾರ್, ಉಪವಿಭಾಗಾಧಿಕಾರಿಯವರ ಕಛೇರಿ, ಜಮಖಂಡಿ, ಬಾಗಲಕೋಟೆ ಜಿಲ್ಲೆ. – ಶ್ರೀ ದುಂಡಪ್ಪ ಈರಪ್ಪ ಹೆಗ್ಗೊಂಡ ಇವರ ಜಾಗಕ್ಕೆ.

2. ಸ್ವಂತ ಕೋರಿಕೆ ಮೇಲೆ ವರ್ಗಾವಣೆಗೊಂಡಿರುವವರು ಸೇರುವಿಕೆ ಕಾಲ, ವರ್ಗಾವಣೆ ಹಾಗೂ ಇನ್ನಿತರೆ ಯಾವುದೇ ಭತ್ಯೆಗಳಿಗೆ ಅರ್ಹರಿರುವುದಿಲ್ಲ. ಉಳಿದ ವರ್ಗಾವಣೆಯು ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯಾಗಿರುವುದರಿಂದ ನಿಯಮಾನುಸಾರ ಸೇರುವಿಕೆ ಕಾಲ ಹಾಗೂ ವರ್ಗಾವಣೆ ಭತ್ಯೆಗೆ ಅರ್ಹರಿರುತ್ತಾರೆ. ವರ್ಗಾವಣೆಯಾಗಿರುವ ಅಧಿಕಾರಿಗಳು ಕೂಡಲೇ ಕರ್ತವ್ಯದಿಂದ ಬಿಡುಗಡೆ ಹೊಂದಿ ವರ್ಗಾವಣೆಗೊಂಡ ಸ್ಥಳದಲ್ಲಿ ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ವಿ. ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1041

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 39 ಎಟಿಎಸ್ 2012, ಬೆಂಗಳೂರು, ದಿನಾಂಕ: 23.06.2012.

ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರ್ ವೃಂದದ ಈ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ/ ಆಡಳಿತ ಹಿತದೃಷ್ಠಿಯಿಂದ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಸ್ಥಳಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ಆದೇಶಿಸಿದೆ.

ಕ್ರ ಸಂ.	ತಹಶೀಲ್ದಾರರ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ ಶ್ರೀ/ಶ್ರೀಮತಿ	ವರ್ಗಾಯಿಸಿ ನೇಮಿಸಿದ ಸ್ಥಳ
1	**ಚನ್ನಬಸಪ್ಪ,** ತಹಶೀಲ್ದಾರ್ ಗ್ರೇಡ್–2, ಗೌರಿಬಿದನೂರು ತಾಲ್ಲೂಕು.	ತಹಶೀಲ್ದಾರ್, ಪಾವಗಡ (ಖಾಲಿ ಹುದ್ದೆಗೆ)
2	**ಎಂ.ಎಂ. ಮಂಜುನಾಥ್,** ತಹಶೀಲ್ದಾರ್, ಶಿರಗುಪ್ಪ, ಬಳ್ಳಾರಿ ಜಿಲ್ಲೆ	ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು
3	**ಬಿ.ಎಸ್. ಮಂಜುನಾಥ್,** ತಹಶೀಲ್ದಾರ್ (ವರ್ಗಾವಣೆ ಆದೇಶದಲ್ಲಿರುವವರು)	ತಹಶೀಲ್ದಾರ್, ನಂಜನಗೂಡು ತಾಲ್ಲೂಕು
4	**ಶಿವಕುಮಾರ ಸ್ವಾಮಿ,** ವ್ಯವಸ್ಥಾಪಕರು, ಉಪ ವಿಭಾಗಾಧಿಕಾರಿಗಳ ಕಛೇರಿ, ಪಾಂಡವಪುರ, ಮಂಡ್ಯ ಜಿಲ್ಲೆ.	ತಹಶೀಲ್ದಾರ್, ಹೆಚ್.ಡಿ, ಕೋಟೆ ತಾಲ್ಲೂಕು
5	**ಟಿ. ಜವರೇಗೌಡ,** ತಹಶೀಲ್ದಾರ್, ಟಿ.ನರಸೀಪುರ (ವರ್ಗಾವಣೆ ಆದೇಶದಲ್ಲಿರುವವರು)	ಪುರಸಭಾ ತಹಶೀಲ್ದಾರ್, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು
6	**ಗೀತಾಕೃಷ್ಣ,** ಪುರಸಭಾ ತಹಶೀಲ್ದಾರ್, ಜಿಲ್ಲಾಧಿಕಾರಿಯವರ ಕಛೇರಿ, ಮೈಸೂರು.	ತಹಶೀಲ್ದಾರ್, ಟಿ. ನರಸೀಪುರ ತಾಲ್ಲೂಕು
7	**ಮಹೇಶ್ ಬಾಬು,** ತಹಶೀಲ್ದಾರ್, ಎನ್.ಹೆಚ್.ಎ.ಐ., ಬೆಂಗಳೂರು.	ತಹಶೀಲ್ದಾರ್, ತುಮಕೂರು ತಾಲ್ಲೂಕು
8	**ಅಜಿತ್ ದೇಸಾಯಿ,** ತಹಶೀಲ್ದಾರ್, ಹಳಿಯಾಳ.	ಚುನಾವಣಾ ತಹಶೀಲ್ದಾರ್, ಹಾಸನ ಜಿಲ್ಲಾಧಿಕಾರಿಯವರ ಕಛೇರಿ
9	**ಸುಮ,** ತಹಶೀಲ್ದಾರ್. ಬೆಂಗಳೂರು ಉತ್ತರ ತಾಲ್ಲೂಕು (ವರ್ಗಾವಣೆ ಆದೇಶದಲ್ಲಿರುವವರು)	ತಹಶೀಲ್ದಾರ್, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ.
10	**ಎಸ್.ಎಂ. ಶಿವಕುಮಾರ್,** ತಹಶೀಲ್ದಾರ್ (ನಾಗಮಂಗಲ ತಾಲ್ಲೂಕಿಗೆ ವರ್ಗಾವಣೆ ಆದೇಶದಲ್ಲಿರುವವರು)	ವರ್ಗಾವಣೆಯನ್ನು ಮಾರ್ಪಡಿಸಿ, ಕಂದಾಯ ಇಲಾಖೆಯ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಲ್ಲಿರುವ ಖಾಲಿ ಹುದ್ದೆಗೆ.
11	**ಸಿ.ಹೆಚ್. ಶಿವಕುಮಾರ್** ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಸೇವೆಗಳು)	ತಹಶೀಲ್ದಾರ್, ನಾಗಮಂಗಲ ತಾಲ್ಲೂಕು.
12	**ವರಪ್ರಸಾದ್ ರೆಡ್ಡಿ,** ತಹಶೀಲ್ದಾರ್, (ವರ್ಗಾವಣೆ ಆದೇಶದಲ್ಲಿರುವವರು)	ಇವರ ವರ್ಗಾವಣೆಯನ್ನು ರದ್ದುಪಡಿಸಿ, ಸಕಾಲ ಕೇಂದ್ರದಲ್ಲಿ ಆಡಳಿತಾಧಿಕಾರಿಯಾಗಿಯೇ ಮುಂದುವರೆಸಿದೆ.

2. ಕ್ರಮ ಸಂಖ್ಯೆ: 11 ರಲ್ಲಿರುವ ಅಧಿಕಾರಿಯ ಸೇವೆಯನ್ನು ಕಂದಾಯ ಇಲಾಖೆಯ ವಶಕ್ಕೆ ನೀಡುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯನ್ನು ಕೋರಲಾಗಿದೆ.

3. ಸ್ವಂತ ಕೋರಿಕೆ ಮೇಲೆ ವರ್ಗಾವಣೆಗೊಂಡಿರುವವರು ಸೇರುವಿಕೆ ಕಾಲ, ವರ್ಗಾವಣೆ ಹಾಗೂ ಇನ್ನಿತರೆ ಯಾವುದೇ ಭತ್ಯೆಗಳಿಗೆ ಅರ್ಹರಿರುವುದಿಲ್ಲ. ಉಳಿದ ವರ್ಗಾವಣೆಯು ಸಾರ್ವಜನಿಕ ಹಿತದೃಷ್ಟಿಯ ವರ್ಗಾವಣೆಯಾಗಿರುವುದರಿಂದ ನಿಯಮಾನುಸಾರ ಸೇರುವಿಕೆ ಕಾಲ ಹಾಗೂ ವರ್ಗಾವಣೆ ಭತ್ಯೆಗೆ ಅರ್ಹರಿರುತ್ತಾರೆ. ವರ್ಗಾವಣೆಯಾಗಿರುವ ಅಧಿಕಾರಿಗಳು ಕೂಡಲೇ ಕರ್ತವ್ಯದಿಂದ ಬಿಡುಗಡೆ ಹೊಂದಿ ವರ್ಗಾವಣೆಗೊಂಡ ಸ್ಥಳದಲ್ಲಿ ಕೂಡಲೇ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1042

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 175 ಎಎಸ್‌ಡಿ 2012, ಬೆಂಗಳೂರು, ದಿನಾಂಕ: 22–6–2012.

ಶಿರಸ್ತೇದಾರ್/ಉಪ ತಹಶೀಲ್ದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್–2 ವೃಂದಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 301 ಎಎಸ್‌ಡಿ 2011 ದಿನಾಂಕ: 30–1–2012 ರಲ್ಲಿ ಪದೋನ್ನತಿ ನೀಡಿ ಆದೇಶಿಸಲಾಗಿದೆ. ಸದರಿ ಆದೇಶದಲ್ಲಿರುವ ಈ ಕೆಳಕಂಡ ಅಧಿಕಾರಿಗಳ ಹೆಸರುಗಳನ್ನು ಅವರುಗಳ ಹೆಸರುಗಳ ಮುಂದೆ ಸೂಚಿಸಿರುವಂತೆ ಸರಿಪಡಿಸಿಕೊಂಡು ಓದಿಕೊಳ್ಳತಕ್ಕದ್ದು.

ಕ್ರ.ಸಂ	ಪದೋನ್ನತಿ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ	ತಹಶೀಲ್ದಾರರ ಹೆಸರು ಶ್ರೀ/ಶ್ರೀಮತಿ	ಸರಿಪಡಿಸಿಕೊಳ್ಳಬೇಕಾಗಿರುವ ಅಧಿಕಾರಿಯ ಹೆಸರು
1	84	ಯು. ಗೋಪಾಲ ತಹಶೀಲ್ದಾರ್ ಗ್ರೇಡ್–2	ಶ್ರೀ ಉಳ್ಳಾಳ ಗೋಪಾಲ ತಹಶೀಲ್ದಾರ್ ಗ್ರೇಡ್–2
2	145	ಆರ್.ಎಮ್. ತುರುಕನಗೇರಿ ತಹಶೀಲ್ದಾರ್ ಗ್ರೇಡ್–2	ಶ್ರೀ ರಾಜ ಅಹ್ಮದ್ ತುರುಕನಗೇರಿ ತಹಶೀಲ್ದಾರ್ ಗ್ರೇಡ್–2

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1043

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕಂಇ 260 ಎಎಸ್‌ಡಿ 2011, ಬೆಂಗಳೂರು, ದಿನಾಂಕ: 23–6–2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 260 ಎಎಸ್‌ಡಿ 2011, ದಿನಾಂಕ 17–04–2012 ರಲ್ಲಿರುವ ಕ್ರಮಸಂಖ್ಯೆ 56ರಲ್ಲಿ "**ಕೊಟ್ರೇಶ್**" ಎಂಬುವುದರ ಬದಲಾಗಿ "**ಕೊಟ್ರೇಶ್ ಹೆಚ್**" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1044

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆರ್‌ಡಿ 462 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 25–6–2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 462 ಎಎಸ್‌ಡಿ 2010, ದಿನಾಂಕ 22–10–2011 ರಲ್ಲಿ ಪರಿವೀಕ್ಷಣಾ ಅವಧಿ ಪ್ರಾರಂಭವಾದ ದಿನಾಂಕ ಮತ್ತು ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕವನ್ನು ಅವರ ಹೆಸರಿನ ಮುಂದೆ ತೋರಿಸಿದಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಕ್ರ.ಸಂ.	ಪರಿವೀಕ್ಷಣಾ ತಹಶೀಲ್ದಾರರ ಹೆಸರು (ಶ್ರೀ/ ಶ್ರೀಮತಿ)	ಪರಿವೀಕ್ಷಣಾ ಅವಧಿ ಪ್ರಾರಂಭವಾದ ದಿನಾಂಕ	ಪರಿವೀಕ್ಷಣಾ ಅವಧಿ ಮುಕ್ತಾಯವಾದ ದಿನಾಂಕ
1	ಭಾಸ್ಕರ್.ಎನ್	30.05.2008	29.05.2010
2	ವೀರೇಶ್ ಬಿರಾದಾರ್	02.06.2008	01.06.2010
3	ಬಾಳಪ್ಪ ಹಂದಿಗುಂದ	30.05.2008	29.05.2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 1045

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 52 ಸಅಸೇ 2012, ಬೆಂಗಳೂರು, ದಿನಾಂಕ: 30-07-2012.

ಕರ್ನಾಟಕ ಸರ್ಕಾರ ಸಚಿವಾಲಯದ ಸೇವೆಗೆ ಸೇರಿದ ಈ ಕೆಳಕಂಡ ಶಾಖಾಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ₹ 28100-50100ರ ವೇತನ ಶ್ರೇಣಿಯ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಲ್ಲಿ ಸ್ಥಳ ನಿಯುಕ್ತಿಗೊಳಿಸಿ ನೇಮಿಸಲಾಗಿದೆ:

ಕ್ರಮ ಸಂಖ್ಯೆ	ಶಾಖಾಧಿಕಾರಿಯ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ	ಬಡ್ತಿ ನೀಡಿ ನೇಮಿಸಲಾದ ಹುದ್ದೆ : ಇಲಾಖೆ
1)	ಎಂ.ಆರ್. ಚಂದ್ರಶೇಖರಾರಾಧ್ಯ ಆರ್ಥಿಕ ಇಲಾಖೆ	ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2 ಮತ್ತು ಸಮನ್ವಯ) - ಶ್ರೀ ರಾಮಯ್ಯ ಇವರ ದಿನಾಂಕ 31-7-2012ರಂದು ವಯೋನಿವೃತ್ತಿಯಿಂದ ತೆರವಾದ ಹುದ್ದೆಗೆ.
2)	ಜೆ.ಆರ್. ಅನ್ನಪೂರ್ಣ ಶಿಕ್ಷಣ ಇಲಾಖೆ	ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಕಾನೂನು ಕೋಶ) - ಖಾಲಿ ಹುದ್ದೆಗೆ.
3)	ಟಿ.ಎ. ಜಯದೇವಮೂರ್ತಿ ಸಿ.ಆ.ಸು. ಇಲಾಖೆ (ಲೆಕ್ಕಪತ್ರ-2)	ಶಾಖಾಧಿಕಾರಿ, ಸಿ.ಆ.ಸು.ಇ. (ಲೆಕ್ಕಪತ್ರ-2) ಈ ಹುದ್ದೆಯನ್ನು ತಾತ್ಕಾಲಿಕವಾಗಿ ಅಧೀನ ಕಾರ್ಯದರ್ಶಿ ಹುದ್ದೆಗೆ ಉನ್ನತೀಕರಿಸಿ ಅದೇ ಹುದ್ದೆಯಲ್ಲಿ ಮುಂದುವರೆಸಲಾಗಿದೆ.
4)	ಸಿದ್ದೇಶ್ ಪೋತಲಕಟ್ಟಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಅಬಕಾರಿ) - ಶ್ರೀ ಮಧುಚಂದ್ರ ತೇಜಸ್ವಿ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
5)	ಮುನಿರಾಜು ಸಿ.ಆ.ಸು. ಇಲಾಖೆ (ಆಡಳಿತ ಸುಧಾರಣೆ)	ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ - ಶ್ರೀ ಕೆ. ಬೀರೇಶ್ ಇವರಿಗೆ ಬಡ್ತಿ ನೀಡಿ ನೇಮಿಸಿದ ಆದೇಶವನ್ನು ಹಿಂಪಡೆದು ಸದರಿ ಹುದ್ದೆಗೆ ನೇಮಿಸಲಾಗಿದೆ.
6)	ಸಿ. ಚಿನ್ನರಾಜು, ಕಂದಾಯ ಇಲಾಖೆ (ರಜಾ ಮೀಸಲಾತಿ)	ಅಧೀನ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡಿ ತಹಶೀಲ್ದಾರ್ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಕಂದಾಯ ಇಲಾಖೆಯ ವಶಕ್ಕೆ ನೀಡಲಾಗಿದೆ.
7)	ಬಿ.ಆರ್. ಬರದೇಲಿಯವರ್ ನಗರಾಭಿವೃದ್ಧಿ ಇಲಾಖೆ	ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇಲ್ಲಿಗೆ ನಿಯೋಜಿಸಲು ಇವರ ಸೇವೆಯನ್ನು ಶಿಕ್ಷಣ ಇಲಾಖೆಯ ವಶಕ್ಕೆ ನೀಡಲಾಗಿದೆ.
8)	ಮಾರ್ಗರೇಟ್ ಲೀನಾ ನರೋನ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸ್ವೀಕೃತಿ ಮತ್ತು ರವಾನೆ ಶಾಖೆ)	ಅಧೀನ ಕಾರ್ಯದರ್ಶಿ, ಗ್ರಾ.ಅ. ಮತ್ತು ಪಂ.ರಾ. ಇಲಾಖೆ (ಜಿಲ್ಲಾ ಪಂಚಾಯತ್) - ಶ್ರೀ ವಿ. ಹನುಮಂತಯ್ಯ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
9)	ಎನ್.ಪಿ. ಪೊಣಚ್ಚ ಸಿ.ಆ.ಸು.ಇ. (ಸಿಬ್ಬಂದಿ-2)	ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಕೆ.ಎ.ಟಿ.) - ಶ್ರೀ ಶ್ರೀಕಂಠ, ಕೆ.ಎ.ಎಸ್. ಇವರ ನಿಧನದಿಂದ ತೆರವಾಗಿರುವ ಹುದ್ದೆಗೆ.

ಭಾಗ

ಸ್ಥಳ ನಿರೀಕ್ಷಣೆಯಲ್ಲಿರುವ ಅಧೀನ ಕಾರ್ಯದರ್ಶಿಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕೆಲವು ಅಧೀನ ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಿ ಅವರ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗಳಿಗೆ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಲಾಗಿದೆ:

ಕ್ರಮ ಸಂಖ್ಯೆ	ಅಧೀನ ಕಾರ್ಯದರ್ಶಿಯ ಹೆಸರು ಮತ್ತು ಇಲಾಖೆ	ವರ್ಗಾಯಿಸಿ ನೇಮಿಸಲಾದ ಹುದ್ದೆ : ಇಲಾಖೆ
1)	ಆರ್. ಶಿವಲಿಂಗಯ್ಯ, ಅಧೀನ ಕಾರ್ಯದರ್ಶಿ ಸಿ.ಆ.ಸು.ಇ. (ಸ್ಥಳ ನಿರೀಕ್ಷಣೆಯಲ್ಲಿ)	ಅಧೀಕ್ಷಕರು (ಗ್ರೇಡ್–1), ನಿರಾಶ್ರಿತರ ಪರಿಹಾರ ಕೇಂದ್ರ, ಸಮಾಜ ಕಲ್ಯಾಣ ಇಲಾಖೆ ಇಲ್ಲಿಗೆ ನಿಯೋಜಿಸಲು ಇವರ ಸೇವೆಯನ್ನು ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ನೀಡಲಾಗಿದೆ.
2)	ಸಿ.ಟಿ. ಜಯರಾಮೇಗೌಡ, ಅಧೀನ ಕಾರ್ಯದರ್ಶಿ ಸಿ.ಆ.ಸು.ಇ. (ಸ್ಥಳ ನಿರೀಕ್ಷಣೆಯಲ್ಲಿ)	ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಕೆ.ಎ.ಟಿ.) – ಶ್ರೀ ಪೂಣಚ್ಚ ಇವರ ದಿನಾಂಕ: 31–7–2012ರಂದು ವಯೋ ನಿವೃತ್ತಿಯಿಂದ ತೆರವಾಗಲಿರುವ ಹುದ್ದೆಗೆ.
3)	ಎಸ್. ರಮೇಶ್, ಅಧೀನ ಕಾರ್ಯದರ್ಶಿ ಸಿ.ಆ.ಸು.ಇ. (ಸೇವೆಗಳು–5)	ಅಧೀನ ಕಾರ್ಯದರ್ಶಿ, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆ – ಶ್ರೀ ಕೆ. ಸುಬ್ಬಯ್ಯ ಇವರ ಸೇವೆಯನ್ನು ಸಿ.ಆ.ಸು. ಇಲಾಖೆಗೆ ಹಿಂದಿರುಗಿಸಿರುವುದರಿಂದ ತೆರವಾಗಿರುವ ಹುದ್ದೆಗೆ.
4)	ಮಧುಚಂದ್ರ ತೇಜಸ್ವಿ, ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ಅಬಕಾರಿ)	ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಸೇವೆಗಳು–5) – ಶ್ರೀ ಎಸ್. ರಮೇಶ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
5)	ಬಿ.ಎನ್. ಶ್ರೀನಿವಾಸ್, ಅಧೀನ ಕಾರ್ಯದರ್ಶಿ ಕಂದಾಯ ಇಲಾಖೆ	ನಿಯೋಜನೆ ಮೇಲೆ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಗ್ರಾ.ಅ. ಮತ್ತು ಪಂ.ರಾ. ಇಲಾಖೆಯ ವಶಕ್ಕೆ ನೀಡಲಾಗಿದೆ.
6)	ಅಬ್ಬಾಸ್ ಷರೀಫ್, ಅಧೀನ ಕಾರ್ಯದರ್ಶಿ ಒಳಾಡಳಿತ ಇಲಾಖೆ	ಅಧೀನ ಕಾರ್ಯದರ್ಶಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ – ಶ್ರೀ ಮೊಹಮ್ಮದ್ ನಿಸ್ಸಾರ್ ಅಹಮ್ಮದ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
7)	ಮೊಹಮ್ಮದ್ ನಿಸ್ಸಾರ್ ಅಹಮ್ಮದ್ ಅಧೀನ ಕಾರ್ಯದರ್ಶಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ	ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ – ಶ್ರೀ ಬಿ.ಎನ್. ಶ್ರೀನಿವಾಸ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
8)	ವಿ. ಹನುಮಂತಯ್ಯ, ಅಧೀನ ಕಾರ್ಯದರ್ಶಿ ಗ್ರಾ.ಅ. ಮತ್ತು ಪಂ.ರಾ. ಇಲಾಖೆ	ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ – ಶ್ರೀ ಅಬ್ಬಾಸ್ ಷರೀಫ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
9)	ಜಿ. ವೆಂಕಟೇಶನ್ ಅಧೀನ ಕಾರ್ಯದರ್ಶಿ ವಸತಿ ಇಲಾಖೆ	ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ – ಶ್ರೀ ಎಸ್. ತಿಪ್ಪೇಸ್ವಾಮಿ ಇವರ ವರ್ಗಾವಣೆಯಿಂದ ತೆರವಾಗಿರುವ ಹುದ್ದೆಗೆ.
10)	ಶ್ರೀರಾಮ, ಅಧೀನ ಕಾರ್ಯದರ್ಶಿ ಕೃಷಿ ಇಲಾಖೆ	ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ – ಶ್ರೀ ಆರ್. ಶಿವಲಿಂಗಯ್ಯ ಇವರ ವರ್ಗಾವಣೆಯಿಂದ ತೆರವಾಗಿರುವ ಹುದ್ದೆಗೆ.
11)	ಎನ್. ಪಾರ್ವತಿ, ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ನೇಮಕಾತಿ ಆದೇಶದಲ್ಲಿರುವ	ಅಧೀನ ಕಾರ್ಯದರ್ಶಿ, ವಸತಿ ಇಲಾಖೆ – ಶ್ರೀ ಜಿ. ವೆಂಕಟೇಶನ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.
12)	ಜೆ.ಆರ್. ವಿಶ್ವನಾಥಾಚಾರ್, ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ನೀಡಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ನೇಮಕಾತಿ ಆದೇಶದಲ್ಲಿರುವ	ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ – ಶ್ರೀ ಶ್ರೀರಾಮ ಇವರ ವರ್ಗಾವಣೆಯಿಂದ ತೆರವಾದ ಹುದ್ದೆಗೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಕೆ. ಲಕ್ಷ್ಮೀನಾರಾಯಣ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1065

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 96 ಪೊಪೆಸೆ 2012, ಬೆಂಗಳೂರು, ದಿನಾಂಕ: 27ನೇ ಜುಲೈ, 2012.

ಲೋಕೋಪಯೋಗಿ ಇಲಾಖೆಯ ಜ್ಞಾಪನಾ ಪತ್ರ: ಸಂಖ್ಯೆ: ಸಿಬಿಎಸ್ 75:ಸಇಂ:ಟಿಆರ್ಎಫ್:ಇಎಸ್‌ಸಿ 2012–13 ದಿನಾಂಕ:15–06–2012ರಲ್ಲಿ ಶ್ರೀ ಶ್ರೀನಿವಾಸಗೌಡ, ಸಹಾಯಕ ಇಂಜಿನಿಯರ್, ಹಾಗೂ ಶ್ರೀ ಸಂತೋಷಕುಮಾರ್ ಉಲ್ಲಾಳ, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರುಗಳ ಸೇವೆಯನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತಕ್ಕೆ ಮರು ಸ್ಥಳ ನಿಯುಕ್ತಿಗೊಳಿಸಲು ಒಳಾಡಳಿತ ಇಲಾಖೆಯ ವಶಕ್ಕೆ ನೀಡಲಾಗಿದೆ. ಶ್ರೀ ಶ್ರೀನಿವಾಸಗೌಡ, ಸಹಾಯಕ ಇಂಜಿನಿಯರ್, ಹಾಗೂ ಶ್ರೀ ಸಂತೋಷಕುಮಾರ್ ಉಲ್ಲಾಳ, ಸಹಾಯಕ ಇಂಜಿನಿಯರ್, ಇವರುಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್‌ಗಳ ಹುದ್ದೆಗೆ ನಿಯೋಜನೆ ಮೇಲೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ನಿಂಗಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು–ಬಿ)

ಪಿ.ಆರ್. 1062

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಡಿಪಿಎಆರ್ 97 ಎಸ್‌ಐಎಸ್ 2012, ಬೆಂಗಳೂರು, ದಿನಾಂಕ: 22ನೇ ಜೂನ್ 2012.

ಶ್ರೀ ಹರ್ಷಗುಪ್ತ ಐ.ಎ.ಎಸ್., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು, ಇವರ ಕುಟುಂಬದ ಸದಸ್ಯರಿಗೆ 2012–13ನೇ ಬ್ಲಾಕ್ ಅವಧಿಯ ಸ್ವಗ್ರಾಮ ರಜಾ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಮಂಜೂರು ಮಾಡಿರುವ ಸಮ ಸಂಖ್ಯೆಯ ದಿನಾಂಕ: 18–06–2012 ಅಧಿಸೂಚನೆಯ ಮೊದಲ ಕಂಡಿಕೆಯ 4ನೇ ಸಾಲಿನಲ್ಲಿ ನಮೂದಿಸಿರು "**ಸ್ವಂತ ಊರಾದ ಭುವನೇಶ್ವರಗೆ**" ಎಂಬುದನ್ನು ತಿದ್ದಿ "**ಸ್ವಂತ ಊರಾದ ದೆಹಲಿಗೆ**" ಎಂಬುದಾಗಿ ಓದುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಯು.ಹೆಚ್. ನಾರಾಯಣಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ ಇಲಾಖೆ (ಸೇವೆಗಳು–1).

ಪಿ.ಆರ್. 1064

OFFICE OF THE CITY CIVIL COURT

NOTIFICATION

No.ADM-I (E) 1798 : 2012, BANGALORE, DATED: 31st July, 2012.

Sri K. Krinshna Naik, Asst. Registrar, City Civil Court, Bangalore who has retired from Service on attaining the age of superannuation w.e.f. 30-6-2012, is granted cash equivalent of leave salary for earned leave not exceeding 300 days at his credit on the date of his retirement i.e, w.e.f. 30-6-2012 in accordance with Rule 118-A of K.C.S.Rs.,

Further, it is certified that there are no departmental enquiries/criminal proceedings are pending against Sri K. Krinshna Naik, Asst. Registrar, of this Court, who has retired from Service on attaining the age of superannuation on the afternoon of 30-6-2012.

He shall be paid pay and allowances admissible for the period of earned leave at his credit as per rules.

BY ORDER OF THE PRL. CITY CIVIL & SESSIONS JUDGE,

Registrar,
City Civil Court,
Bangalore.

P.R. 1066

HIGH COURT OF KARNATAKA

NOTIFICATION

No.LCA-II. 11 (Rtmt)/ 2011, BANGALORE, DATED: 30th July, 2012.

Sri. Mukkanna.G, Assistant Registrar, working in City Civil Court, Bangalore is permitted to retire from service on the afternoon of 31-07-2012, on attaining the age of superannuation, under Rule 95(1) of K.C.S. Rules.

BY ORDER,
V. K. HASYAGAR,
Assistant Registrar,
High Court of Karnataka, Bangalore.

P.R. 1067

OFFICE OF THE CITY CIVIL COURT

NOTIFICATION

No. ADM-I (E) 1814 : 2012, BANGALORE, DATED: 1st August, 2012.

Sri G. Mukkanna, Asst. Registrar, City Civil Court, Bangalore who has retired from Service on attaining the age of superannuation w.e.f. 31-7-2012, is granted cash equivalent of leave salary for earned leave not exceeding 300 days at his credit on the date of his retirement i.e, w.e.f. 31-7-2012 in accordance with Rule 118-A of K.C.S.Rs.,

Further, it is certified that there are no departmental enquiries/criminal proceedings are pending against Sri G. Mukkanna, Asst. Registrar, of this Court, who has retired from Service on attaining the age of superannuation on the afternoon of 31-7-2012.

He shall be paid pay and allowances admissible for the period of earned leave at his credit as per rules.

BY ORDER OF THE PRL. CITY CIVIL & SESSIONS JUDGE,
REGISTRAR,
CITY CIVIL COURT,
BANGALORE.

P.R. 1068

HIGH COURT OF KARNATAKA

NOTIFICATION

No.GOB(I) 28/ 2001, BANGALORE, DATED: 28th July, 2012

In pursuance of Rule 118-A (1) of K.C.S.Rs., and as per Government Order No. FD 05 SRS 2012, dated 14-06-2012 sanction is hereby accorded for payment of cash equivalent to leave salary for Earned Leave at the credit of the following retired Judicial Officers, subject to maximum of 300 days, on the date of their attaining the age of superannuation i.e., 30-06-2012, It is certified that no Departmental Enquiry was pending against the said Officers, as on that date.

Sl.No.	Name of the Officer	Designation prior to retirement
1.	Sri. Javid Pasha	District Judge, OOD, Secretary, Karnataka State Human Rights Commisiion, Vidhana Soudha, Bangalore.
2.	Sri. Ninganagouda Jantali	Ad-hoc District Judge, Presiding Officer, Fast Track Court, D.K., Mangalore
3.	Sri. B.M. Gowda	Senior Civil Judge, OOD, I Addl Solicitor and Ex-Officio Deputy Secretary to Government, Department of Law, Justice and Human Rights, Bangalore.

BY ORDER OF HON`BLE THE CHIEF JUSTICE,
P. Krishna Bhat,
Registrar General,

P.R. 1069

HIGH COURT OF KARNATAKA

NOTIFICATION

No.GOB(I) 1/ 2001, BANGALORE, DATED: 28th July, 2012.

The Presiding Officer of the court of XXII Addl. City Civil and Sessions Judge, Bangalore City is concurrently appointed as the Presiding Officer of the court of XI Addl. City Civil and Sessions Judge, Bangalore City, with effect from 01-08-2012 and until further Orders.

BY ORDER OF THE HIGH COURT,
P. Krishna Bhat,
Registrar General,

P.R. 1070

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 61 ಎಟಿಎಸ್ 2012, ಬೆಂಗಳೂರು, ದಿನಾಂಕ: 01ನೇ ಆಗಸ್ಟ್, 2012.

ಶ್ರೀ ಸಿ. ನಾಗರಾಜು, ಪುರಸಭಾ ತಹಶೀಲ್ದಾರ್, ಕೋಲಾರ ಜಿಲ್ಲಾಧಿಕಾರಿ ಕಛೇರಿ, ಅವರು ಸದ್ಯ ತಹಶೀಲ್ದಾರ್, ನೆಮ್ಮದಿ ನಿರ್ದೇಶನಾಲಯ, ಬೆಂಗಳೂರು ಇಲ್ಲಿಗೆ ವರ್ಗಾವಣೆ ಆದೇಶದಲ್ಲಿದ್ದು, ಅವರನ್ನು ಸಾರ್ವಜನಿಕ/ ಆಡಳಿತ ಹಿತದೃಷ್ಟಿಯಿಂದ ತಹಶೀಲ್ದಾರ್, ವಿರಾಜಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ ಇಲ್ಲಿ ಖಾಲಿ ಇರುವ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1071

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 59 ಎಟಿಎಸ್ 2012, ಬೆಂಗಳೂರು, ದಿನಾಂಕ: 30ನೇ ಜುಲೈ, 2012.

ಶ್ರೀ ಕೇಶವಮೂರ್ತಿ, ತಹಶೀಲ್ದಾರ್ ಗ್ರೇಡ್–2, ದೇವನಹಳ್ಳಿ ತಾಲ್ಲೂಕು ಅವರನ್ನು, ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಶ್ರೀ ಎಲ್.ಸಿ.ನಾಗರಾಜ್ ಅವರ ಜಾಗಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ. ಈ ವರ್ಗಾವಣೆಯು ಸ್ವಂತ ಕೋರಿಕೆ ವರ್ಗಾವಣೆ ಆಗಿರುವುದರಿಂದ, ಸೇರುವಿಕೆ ಕಾಲ ಹಾಗೂ ವರ್ಗಾವಣೆ ಭತ್ಯೆ ಹಾಗೂ ಇನ್ನಿತರೆ ಯಾವುದೇ ಭತ್ಯೆಗಳಿಗೆ ಅರ್ಹರಿರುವುದಿಲ್ಲ.

ಶ್ರೀ ಎಲ್.ಸಿ.ನಾಗರಾಜ್, ತಹಶೀಲ್ದಾರ್ ಗ್ರೇಡ್–1 ಅವರ ಸ್ಥಳ ನಿಯುಕ್ತಿ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1072

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 39 ಎಟಿಎಸ್ 2012 (ಭಾಗ–2) ಬೆಂಗಳೂರು, ದಿನಾಂಕ: 30ನೇ ಜುಲೈ, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ :ಕಂಇ 39 ಎಟಿಎಸ್ 2012 ದಿನಾಂಕ: 03–07–2012 ರಲ್ಲಿ ಶ್ರೀ ಹೆಚ್.ಕೆ. ಗೀತಾಕೃಷ್ಣ, ತಹಶೀಲ್ದಾರ್ ಟಿ.ನರಸೀಪುರ ಇವರನ್ನು ಪುರಸಭೆ ತಹಶೀಲ್ದಾರ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಇಲ್ಲಿಗೆ ವರ್ಗಾಯಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ರದ್ದುಪಡಿಸಿ ತಹಶೀಲ್ದಾರ್, ಟಿ. ನರಸೀಪುರ ಹುದ್ದೆಯಲ್ಲಿಯೇ ಮುಂದುವರೆಸಿ ಆದೇಶಿಸಿದೆ ಹಾಗೂ ಶ್ರೀ ಬಿ. ಶಿವಸ್ವಾಮಿ, ತಹಶೀಲ್ದಾರ್ ಇವರನ್ನು ಟಿ. ನರಸೀಪುರ ತಹಶೀಲ್ದಾರ್ ಹುದ್ದೆಗೆ ವರ್ಗಾಯಿಸಿದ ದಿನಾಂಕ: 22–06–2012 ಮತ್ತು 25–06–2012ರ ಅಧಿಸೂಚನೆಗಳನ್ನು ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1073

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 39 ಎಲ್‌ಜಿಹೆಚ್ 2011 ಬೆಂಗಳೂರು, ದಿನಾಂಕ: 01ನೇ ಆಗಸ್ಟ್, 2012.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964, ಸಬ್ ಸೆಕ್ಷನ್ (1) 94 (ಎ)ರ ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಹಾಸನ ಜಿಲ್ಲೆಯ ಆಲೂರು ತಾಲ್ಲೂಕು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಈ ಕೆಳಕಂಡ ವ್ಯಕ್ತಿಗಳೊಂದಿಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ರಚಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ಪ್ರವರ್ಗ
1	ಶ್ರೀ ಹೆಚ್.ಕೆ. ಕುಮಾರಸ್ವಾಮಿ, ವಿಧಾನಸಭಾ ಸದಸ್ಯರು, ಆಲೂರು ವಿಧಾನಸಭಾಕ್ಷೇತ್ರ	ಅಧ್ಯಕ್ಷರು
2	ಶ್ರೀ ನಾಗರಾಜ್ ಬಿನ್ ಜವರೇಗೌಡ, ಹರೇಹಳ್ಳದ ಕೊಪ್ಪಲು ಪಾಳ್ಯ ಅಂಚೆ, ಆಲೂರು ತಾಲ್ಲೂಕು ಹಾಸನ ಜಿಲ್ಲೆ.	ಸದಸ್ಯರು (ಸಾಮಾನ್ಯ)
3	ಶ್ರೀ ಲಕ್ಷ್ಮಯ್ಯ ಬಿನ್ ಈರಯ್ಯ, ಕೊಡಗತ್ತಳ್ಳಿ, ಕಲ್ಲಾರೆ ಅಂಚೆ, ಆಲೂರು ತಾಲ್ಲೂಕು ಬ್ಲೋಕು, ಹಾಸನ ಜಿಲ್ಲೆ.	ಸದಸ್ಯರು (ಪರಿಶಿಷ್ಟ ಜಾತಿ)
4	ಶ್ರೀಮತಿ ಶೋಭಾ ಕೋಂ ಪೂವಯ್ಯ ವಾಟೀಪುರ, ಮೇಲಗಳಲೆ ಅಂಚೆ, ಕೆ.ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.	ಸದಸ್ಯರು (ಮಹಿಳೆ)
5	ತಹಶೀಲ್ದಾರರು, ಆಲೂರು ತಾಲ್ಲೂಕು, ಹಾಸನ ಜಿಲ್ಲೆ.	ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ.ರಾಮಸ್ವಾಮಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ–1).

ಪಿ.ಆರ್. 1074

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 57 ಎಟಿಎಸ್ 2012 ಬೆಂಗಳೂರು, ದಿನಾಂಕ: 02ನೇ ಆಗಸ್ಟ್, 2012.

ಶ್ರೀ ಕೊಟ್ರೇಶ್. ಹೆಚ್, ತಹಶೀಲ್ದಾರ್ ಗ್ರೇಡ್–1, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ ಅವರನ್ನು ತಹಶೀಲ್ದಾರ್ ಗ್ರೇಡ್–1, ಶಿವಮೊಗ್ಗ ತಾಲ್ಲೂಕು ಇಲ್ಲಿಗೆ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಿದೆ. ಅವರ ವರ್ಗಾವಣೆ ಸ್ವಂತ ಕೋರಿಕೆ ವರ್ಗಾವಣೆ ಆಗಿರುವುದರಿಂದ ಸೇರುವಿಕೆ ಕಾಲ, ವರ್ಗಾವಣೆ ಭತ್ಯೆ ಹಾಗೂ ಇನ್ನಿತರೆ ಯಾವುದೇ ಭತ್ಯೆಗಳಿಗೆ ಅರ್ಹರಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ವಿ. ರಾಮಲಿಂಗಯ್ಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3).

ಪಿ.ಆರ್. 1075